(ಶ್ರೀ ಎಸ್. ಎಂ. ಕೃಷ್ಣ)

ಷುಗರ್ ಕಂಟೆಂಟು ಶೇಕಡಾ 12 ರಷ್ಟು ಇರುತ್ತೆ. ಇನ್ನು ಕೆಲವು ಕಡೆ ಷುಗರ್ ಕಂಟೆಂಟು ಶೇಕಡಾ 12.8 ರಷ್ಟು ಇರುತ್ತೆ. ಇದರ ಆಧಾರದ ಮೇಲೆ ಕಾರ್ಖಾನೆಯವರೇ ಬೆಲೆ ನಿಗದಿ ಮಾಡಿ ರೈತರಿಗೆ ಕೊಡುತ್ತಾರೆ. ಕೆಲವು ಕಡೆ ಶೇಕಡಾ 9 ಇಲ್ಲವೇ ಹತ್ತರಷ್ಟು ಷುಗರ್ ಕಂಟೆಂಟು ಇರುವುದರಿಂದ ಅಲ್ಲಿ ಬೆಲೆ ಕಡಿಮೆ ಕೊಡುತ್ತಾರೆ. ಇದನ್ನು ಸರಕಾರ ತಪ್ಪಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಬಿ. ಬಂಗಿ.—ಕನಿಷ್ಟ ಬೆಲೆ 90 ರೂಪಾಯಿ ಇರಬೇಕೆಂದು ನಿಗದಿ ಮಾಡಿರುವುದರಿಂದ ಎಲ್ಲ ಕಬ್ಬನ್ನೂ ರೈತರು ಆಯಾ ಕಾರ್ಖಾನೆಗೇ ಕೊಡುತ್ತಿರುವುದರಿಂದ ಇದರ ಗರಿಷ್ಟ ಬೆಲೆಯನ್ನೂ ಯಾವ ಯಾವ ಕಡೆ ಎಷ್ಟೆಷ್ಟು ಇರಬೇಕೆಂದು ನಿಗದಿ ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ.—ಇದರ ಬಗ್ಗೆ ಸಾಕಷ್ಟಾದ ಒಂದು ನೀತಿಯನ್ನು ಅನುಸರಿಸಲು ನಮ್ಮ ರಾಜ್ಯ ಸರಕಾರದವರು ಈಚೆಗೆ ಮಹಾರಾಷ್ಟ್ರದ ಮಾದರಿಯಲ್ಲಿ ಒಂದು ಹೈ ಪವರು ಕಮಿಟಿಯನ್ನು ನೇಮಕ ಮಾಡಬೇಕೆಂದು ಸರಕಾರ ಒಂದು ತೀರ್ಮಾನಕ್ಕೆ ಬಂದಿದೆ. ಯಾವುದೇ ಕಾರ್ಖಾನೆಗೆ ಗರಿಷ್ಟ ಬೆಲೆ ಇರಬೇಕೆಂದು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕನಿಷ್ಟ ಬೆಲೆಯನ್ನು ಕೇಂದ್ರ ಸರಕಾರದವರು ಸೂಚಿಸುತ್ತಾರೆ, ಇಷ್ಟು ಬೆಲೆಯನ್ನು ರೈತರಿಗೆ ಒದಗಿಸಿ ಕೊಡಬೇಕು ಎನ್ನುವುದು ಎಲ್ಲ ಕಾರ್ಖಾನೆಗಳವರ ಕರ್ತವ್ಯ. ಇದಕ್ಕೆ ಕಡಿವಾಣ ಇಲ್ಲದಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ. ಕೆಲವು ಕಾರ್ಖಾನೆಗಳವರು ಕೇಂದ್ರದವರು ಹೇಳಿರುವ ಬೆಲೆಗಿಂತ ಹೆಚ್ಚಿಗೆ ಕೊಡುತ್ತಾರೆ. ಎಷ್ಟು ಕೊಡಬೇಕೆನ್ನುವುದು ಆಯಾ ಕಾರ್ಖಾನೆಯ ಮೇಲೆ ಅವಲಂಬಿಸಿರುತ್ತದೆ.

ಶ್ರೀ ಪಿ. ಪಿ. ಹೆಗ್ಗರೆ.—ಹತ್ತಿಪ್ಪತ್ತು ಎಕರೆಗಳಲ್ಲಿ ಕಬ್ಬು ಬೆಳೆಯುವ ರೈತರಿಗೆ ಶೇಕಡಾ 95 ರಷ್ಟು ಕಬ್ಬನ್ನು ಕೊಟ್ಟರು ಸ್ವಲ್ಪ ಭಾಗದ ಕಬ್ಬು ಬೆಲ್ಲ ಮಾಡಲು ಅವರಿಗೆ ಸಿಗುತ್ತದೆ. ಆದರೆ ಒಂದೆರಡು ಎಕರೆಗಳಲ್ಲಿ ಕಬ್ಬು ಬೆಳೆಯುವ ರೈತರಿಗೆ ಬೆಲ್ಲ ಮಾಡಲು ಅವಕಾಶ ಇಲ್ಲ. ಇಂತಹ ರೈತರಿಗೆ ಬೆಲ್ಲ ಮಾಡಲು ಅವಕಾಶ ಮಾಡಿಸಿ ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇದು ಅಲ್ಲಿಯ ಸನ್ನಿವೇಶಗಳ ಮೇಲೆ ನಿರ್ಧಾರ ಮಾಡಬೇಕಾಗುತ್ತದೆ.

OFFICIALS OF MOTOR VEHICLE DEPARTMENT

244. Sri M. B. RAMASWAMY (Anekal)—

Will the Minister for Transport and Housing be pleased to state :–

(a) the number of class I, II, III and IV Officials working in the Motor Vehicle Department ;

(b) of them, the number of officials belonging to S.C./S.T., (Categorywise information may be furnished) ;

(c) whether up-to-date cadre and recruitment rules has been finalised ;

(d) if not, the basis adopted for granting promotion from lower cadre to upper cadre ;

(e) whether it has come to the notice of the Government that injustice has been done to Motor Vehicle Inspectors in respect of promotion ;

(f) the number of officials and officers of the Motor Vehicle Department are working in Bangalore for past 8 to 10 years ?